# ಶ್ರೀ ಸತ್ಯಧರ್ಮ ಚರಿತ್ರೆ

ಶ್ರೀ ಸತ್ಯಧರ್ಮತೀರ್ಥರ ಪಾದಯುಗ್ಮದಲಿ
ನಾ ಶರಣು ಎನ್ನ ಪಾಲಿಪರು ಎಡಬಿಡದೆ
ಅಸಮ ಅನುಪಮ ಸರ್ವಗುಣ ಗುಣಾರ್ಣವ ಅನಘ
ಬಿಸಜಜಾಂಡದ ಒಡೆಯ ಶ್ರೀಶನಿಗೆ ಪ್ರಿಯರು । ಪ ।

ಹಂಸನಾಮಕ ವಿಷ್ಣುವನರುಹಾಸನ ಸನಕ
ದೂ:ರ್ವಾಸ ಮೊದಲಾದ ಗುರುವಂಶಜಾತ
ದಶಪ್ರಮತಿ ಸರಸಿಜನಾಭ ನರಹರಿತೀರ್ಥ
ಬಿಸಜ ಚರಣಂಗಳಲಿ ಸರತ ನಾ ಶರಣು ।೧।

ಮಾಧವ ಅಕ್ಷೋಭ್ಯ ಜಯವಿದ್ಯಾಧಿರಾಜ
ರಾಜೇಂದ್ರ ಕವೀಂದ್ರ ವಾಗೀಶ ರಾಮಚಂದ್ರ
ವಿಭುದೇಂದ್ರ ವಿದ್ಯಾನಿಧಿಗಳು ಈ ಸರ್ವ
ಸುತಪೋನಿಧಿ ಯತಿವರ್ಯರಿಗೆ ನಮಿಪೆ ।೨।
ವೇದಾಂತ ಕೋವಿದರು ರಘುನಾಥ ರಘುವರ್ಯ
ಪದವಾಕ್ಯ ತತ್ತ್ವಜ್ಞ ರಘೂತ್ತಮಾರ್ಯರಿಗೆ
ವೇದವ್ಯಾಸಾಭಿದ ಗುರುವಿದ್ಯಾಧೀಶರಿಗೆ
ವೇದನಿಧಿಗಳಿಗೆ ನಾ ಬಾಗುವೆ ಶಿರವ ।೩।

ಸತ್ಯವ್ರತ ಸತ್ಯನಿಧಿ ಸತ್ಯನಾಥರಿಗೆ
ಸತ್ಯಾಭಿನವಸತ್ಯಪೂರ್ಣರಿಗೆ ನಮಿಪೆ
ಸತ್ಯವಿಜಯರಿಗೆ ಸತ್ಯಪ್ರಿಯ ಸತ್ಯಬೋಧರಿಗೆ
ಸತ್ಯಸಂಧರಿಗೆ ನಾ ಶರಣಾದೆ ಎಂದೂ ॥ ೪ ॥

ಸತ್ಯವರತೀರ್ಥರಿಗೆ ಸತ್ಯವರ ಕರಜಾತ
ಸತ್ಯಧರ್ಮರಿಗೆ ನಾ ಮನಸಾ ಆ ನಮಿಪೆ
ಸತ್ಯಧರ್ಮರ ಮಹಿಮೆ ಬಹು ಬಹು ಬಹುಳವು
ಕಿಂಚಿತ್ತು ಅಂಶ ಮಾತ್ರ ಸೂಚಿತವು ಇಲ್ಲಿ ॥ ೫ ॥

ಉದ್ಧಾಮ ಪಂಡಿತರು ನವರತ್ನ ವಂಶಜರು
ವಿದ್ವತ್ ಶಿರೋಮಣಿ ಅಣ್ಣಾಚಾರ್ಯರು
ವೈಧಿಕ ಸದಾಚಾರಿ ತ್ರಿಕರಣದಿ ಶುದ್ಧರು
ನಂದಿನಿಧರ ಮಧ್ವಮಾಧವ ಪ್ರಿಯರು ॥ ೬ ॥

ವಿತ್ತಸಂಗ್ರಹದಲ್ಲಿ ಚಿತ್ತವನು ಇಡದಲೆ
ಸತ್ಯಧರ್ಮದಿರತರು ಸಂತತ ಇವರು
ಸದಾಗಮಿಕ ಭಾಗವತ ಮಾಧ್ವ ಸಚ್ಛಾಸ್ತ್ರದಿ
ಮುದದಿಂದ ಕಾಲ ಉಪಯೋಗ ಮಾಡುವರು ॥ ೭ ॥

ಇಂಥಾ ಭಾಗವತರಲ್ಲಿ ಗಂಗಾಧರನೇನೇ
ಬಂದು ಔತಣ ಉಂಡು ಉಡುಗೊರೆಯಕೊಂಡು
ಸಂತತ ತಾ ಧ್ಯಾನಿಸುವ ರಾಮನ್ನ ಇವರು
ಮುಂದು ಪೂಜಿಪ ಯೋಗ ಅನುಗ್ರಹ ಮಾಡಿದರು । ೮ ।

ಅಣ್ಣಾಚಾರ್ಯರ ಮನೆಯಲ್ಲಿ ಅಕ್ಕಿ
ಉಣಲಿಕ್ಕೆ ಸಾಲದೆ ಇರುವಾಗ ಬಂದ
ಬ್ರಾಹ್ಮಣ ಓವನು ಭಸ್ಮಧರ ಅವನು
ಅನ್ನ ಬೇಕೆಂದನು ಮಧ್ಯಾಹ್ನ ಕಾಲ । ೯ ।

ಅನ್ನ ಅನ್ನದ ಅನ್ನಾದನ್ನ ಸ್ಮರಿಸುತ್ತ
ಅಣ್ಣಾಚಾರ್ಯರು ಅಡಿಗೆ ತಾ ಮಾಡಿ
ಬ್ರಾಹ್ಮಣನಿ ಬಡಿಸಿ ಧೋತ್ರಗಳ ಕೊಟ್ಟರು
ಪೂರ್ಣ ಉಂಡು ಪೋದ ವಿಪ್ರನು ತುಷ್ಟಿಯಲ್ಲಿ । ೧೦ ।

ಹಿಂದೆ ಆಚಾರ್ಯರು ಪೋಗಿ ನೋಡಲು ಶಿವನ
ಮಂದಿರದಿ ವಿಪ್ರ ಅಂತರ್ಧಾನನಾದ
ಮಂದಾಕಿನಿಧರನ ಮೂರ್ತಿಯಲಿ ಧೋತ್ರಗಳು
ಚಂದದಿ ಇದ್ದವು ದಕ್ಷಿಣೆ ಸಮೇತ । ೧೧ ।

ಸವಣೂರು ರಾಜ್ಯದ ಮಂತ್ರಿ ಖಂಡೇರಾಯ
ದಿವಿಜರ ಲೋಕಯಾತ್ರೆಯು ಮಾಡಲಾಗ
ದೇವರ ನೈವೇದ್ಯಕ್ಕಾದರಣೆ ತಪ್ಪಲು
ಸವಣೂರು ಪ್ರಾಂತವ ಬಿಟ್ಟು ತೆರಳಿದರು ।೧೨।

ದೇವತಾಂಶರು ಇವರು ಮಾನುಷ ಜನ್ಮವ
ಭೂಮಿಯಲ್ಲಿ ಕೊಂಡು ಮಾನುಷ್ಯ ಜನರಂತೆ
ಭವಣೆಗಳ ಹರಿಸ್ಮರಣೆಯಿಂ ತಾಳಿ ತಪ್ಪಸ್ಸಂತೆ
ದಿವ್ಯ ಮಂತ್ರಾಲಯ ಕ್ಷೇತ್ರ ಐದಿದರು ।೧೩।

ಔದಾರ್ಯಗುಣನಿಧಿ ಶ್ರೀರಾಘವೇಂದ್ರ
ತೀರ್ಥರ ವೃಂದಾವನ ಸೇವೆ ಮಾಡಿ
ಕೃತಕೃತ್ಯರಾದರು ಅಣ್ಣಾಚಾರ್ಯರು
ಒದಗಿ ಅನುಗ್ರಹಿಸಿದರು ಗುರುಗಳು ಬೇಗ ।೧೪।

ಶ್ರೀ ರಾಘವೇಂದ್ರ ತೀರ್ಥಾರ್ಯಕರುಣೆಗಳು
ತೋರಿ ಸ್ವಪ್ನದಿ ಸತ್ಯವರರಲ್ಲಿ ಪೋಗೆ
ದೊರೆಯುವು ಇಷ್ಟಾರ್ಥ ಎಂದು ಪೇಳಿದರು
ಹೊರಟರು ಆಚಾರ್ಯರು ಸತ್ಯವರರಲ್ಲಿ ।೧೫।

ಆ ಸಮಯ ಶ್ರೀ ಸತ್ಯವರತೀರ್ಥರ ಮಠದಿಂ
ಶ್ರೀ ಸ್ವಾಮಿ ಮಂಜುಶ ಕಳವು ಆಗಿ
ವ್ಯಸನದಲಿ ಉಪೋಶಣದಿ ಸತ್ಯವರರಿದ್ದರು
ಭಾಸವಾಗದೆ ಮೂರ್ತಿಗಳಿರುವ ಸ್ಥಳವು ।೧೬।

ಮಾರ್ಗದಲಿ ಅಣ್ಣಾಚಾರ್ಯರು ಮೂರ್ತಿಗಳ
ಝುಗಝುಗಿಪ ಕಾಂತಿಯ ತಾ ಕಂಡು ಮಠಕ್ಕೆ
ಪೋಗಿ ಶ್ರೀ ಸತ್ಯವರರಲ್ಲಿ ಪೇಳಿದರು
ಹೇಗೆ ವರ್ಣಿಸುವೆ ಆ ಗುರುಗಳ ಆನಂದ ।೧೭।

ನಿಗಮ ಘೋಷಂಗಳು ವಿಪ್ರಜನ ಮುಖದಿಂದ
ಮಂಗಳ ಧ್ವನಿ ಮೇಳ ತಾಳವಾದ್ಯಗಳು
ಕಂಗೊಳಿಸುವ ಮೆರವಣಿಗೆ ಮಥ ಮಂದಿರಕ್ಕೆ
ಗಂಗಾಜನಕನ ಮೂರ್ತಿಗಳ ತಂದರು ।೧೮।

ಯುಕ್ತಕಾಲದಿ ಅಣ್ಣಾಚಾರ್ಯಸೂರಿಗಳು
ಸತ್ಯವರರ ಅಮೃತ ಹಸ್ತಾಭಿಷೇಕ
ಯತಿ ಆಶ್ರಮ ಸತ್ಯಧರ್ಮತೀರ್ಥ
ರೆಂದು ನಾಮಾ ಪ್ರಣವ ಉಪದೇಶಕೊಂಡರು ।೧೯।

ಪ್ರಣವ್ರೋಪದೇಶ ಗುರು ಹಸ್ತದಿಂ ಅಭಿಷೇಕ
ಘನ ಮಹಾವೇದಾಂತ ಪೀಠವು ಲಭಿಸಿ
ಈ ನಮ್ಮ ಸತ್ಯಧರ್ಮರ ದೇಶದಿಗ್ವಿಜಯ
ಜ್ಞಾನೋಪದೇಶ ಹರಿಪೂಜಾ ಮಾಡಿದರು ।೨೦।

ಭಾವುಕ ಪ್ರಿಯತಮಸನತ್ಸುಜಾತೀಯವು
ಭಾವದೀಪಿಕ ಶ್ರೀಮದ್ಭಾಗವತಕೆ
ತತ್ತ್ವಸಂಖ್ಯಾನ ಶ್ರೀ ವಿಷ್ಣುತತ್ತ್ವನಿರ್ಣಯ
ಇವು ಎರಡಕ್ಕೂ ಟಿಪ್ಪಣಿ ಬರೆದು ಇಹರು ।೨೧।

ವಾಗ್ವಜ್ರ ಧಾರಾವ ದುರ್ವಾದಿಗಿರಿಗುಲಿಶ
ಜಗತಲ್ಲಿ ಹೋದಕಡೆ ಎಲ್ಲೂ ಮರ್ಯಾದೆ
ಬಾಗುವ ಯೋಗ್ಯರಿಗೆ ಸತ್ತತ್ವ ಉಪದೇಶ
ಜಗಕ್ಷೇಮಕರ ಪೂಜಾ ವರವು ದೀನರಿಗೆ ।೨೨।

ಮೂವತ್ತು ಮೇಲ್ಮೂರು ವತ್ಸರವು ಶ್ರೀಮಠ
ಸುವಿತರಣೆಯಿಂದ ಆಡಳಿತ ಮಾಡಿ
ಸುವರ್ಣ ರತ್ನಾಭರಣ ಮಠತೋಟಂಗಳ
ದೇವಪ್ರೀತ್ಯರ್ಥ ಸೇರಿಸಿದರು ಮಠಕೆ ।೨೩।

ಹದಿನೇಳನುರು ಐವತ್ತೆರಡು ಶಾಲಿಶಕ
ತ್ರಯೋದಶಿ ಶ್ರಾವಣ ಕೃಷ್ಣಪಕ್ಷ
ಇಂಥಾ ಸುಪುಣ್ಯ ದಿನದಲ್ಲಿ ಶ್ರೀ ಹರಿಯ
ಪಾದವನ್ನೈದಿದರು ಹರಿಯಧ್ಯಾನಿಸುತ ।೨೪।

ಮತ್ತೊಂದು ಅಂಶದಲಿ ವೃಂದಾವನದಲ್ಲಿ
ಬಂದು ಸೇವಿಸುವವರ ವಾಂಛಿತವೀಯುತ್ತ
ನಂದಿನಿಧರ ಮಧ್ವ ಮಾಧವನ ಒಲಿಮೆಯಿಂ
ನಿಂತಿಹರು ಸ್ಮರಿಪರ ಗೋಕಲ್ಪತರುವು ।೨೫।

ಕನ್ನಡಪ್ರದೇಶದಲಿ ಮಹಿಷೂರು ರಾಜ್ಯ ಹೊಳೆ
ಹೊನ್ನೋರು ಕ್ಷೇತ್ರದಲಿ ವೃಂದಾವನ
ಜಹ್ನು ಕನ್ಯಾ ಬಿಂದು ರೂಪದಲಿ ವರ್ಷಿಪಳು
ಜಾಹ್ನವಿಧರ ಉಸುವು ಕಣರೂಪದೊಳಗೆ ।೨೬।

ಒಲಿವ ಶಿವ ಸತ್ಯಧರ್ಮರ ನಾಮ ಸ್ಮರಿಸಲು
ಒಲಿವರು ಮಧ್ವಮುನಿ ಶಿವನು ನಮಗೊಲಿಯೆ
ಒಲಿವನು ಅಜಪಿತ **"ಶ್ರೀ ಪ್ರಸನ್ನ ಶ್ರೀನಿವಾಸನು"**
ಒಲಿವ ಬೋಧರು ಮಧ್ವಮುನಿ ಒಲಿದರೇವೇ ।೨೭।

# ಶ್ರೀ ಸತ್ಯಧರ್ಮರ ಸ್ತುತಿ :

ಸ್ಮರಿಸಿ ಬದುಕಿರಿ ಸತ್ಯಧರ್ಮತೀರ್ಥರ
ಚರಣಕೆರಗಿರೊ ಹರಿದಾಸವರ್ಯರ । ಪ ।
ಸತ್ಯವರ ಕರ ಸರಸಿಜಾತರ
ಸತ್ಯಾರಮಣನ ಒಲಿಸಿಕೊಂಡ ಧೀರರ । ೧ ।
ಸತ್ಯಸಂಕಲ್ಪರ ಧರೆಗೆ ಇತ್ತವರ
ಭೃತ್ಯರಘಗಳ ತರಿದುಕಾಯ್ವರ । ೨ ।
ದೇವಕೀಯನ ಕಥಾಭಾಗವತಾರ್ಥಸು
ವ್ಯಾಖ್ಯ ಮಾಡಿದ ಪ್ರಖ್ಯಾತ ಮಹಿಮರ । ೩ ।
ನೆನೆದ ಮಾತ್ರದಿ ಎನ್ನಪ್ಪ ಎಣಿಸದೆ
ಕ್ಷಣದಿ ತಾಪವ ಪರಿಹರಿಸಿಪೊರೆವರ । ೪ ।
ಸಲಿಲ ಕಾಂಚನಪುರದಲ್ಲಿರುವರ
ಒಲಿದು ಕಾಯ್ವರ ಕರೆದ ಮಾತ್ರದಿ ಬಂದು । ೫ ।
ಸತ್ಯಬೋಧರ ಸತ್ಯಸಂಧರ
ಸತ್ಯವರಸುಕುಲ ಸುಜಾತರ । ೬ ।
ಮಧ್ವಹೃತ್ಪದ್ಮ ವಾಸವಿಧಿಪಿತ
ಶ್ರೀದ **"ಶ್ರೀಪ್ರಸನ್ನ ಶ್ರೀನಿವಾಸ"** ಪ್ರಿಯರ । ೭ ।